ವಿರಾಮ
ಓದುವ ಲೋಕಕ್ಕೆ ಓದುವ ನಿಲ್ದಾಣ
ವಿಶ್ವವಾಣಿ
11.06.2023
ಭಾನುವಾರ

ಅಮೆರಿಕನ್ನಡಿಗರ ಜೀವನ ಜೋಕಾಲಿ

ಅಲ್ಲಿನ ಕನ್ನಡಿಗರ ಶಬ್ದಮಾಲಿಕೆ

ಬದುಕನ್ನು ಅರಸುತ್ತಾ ಕನ್ನಡಿಗರು ಸಾಗರ ದಾಟಿ ಪಯಣಿಸಿದ್ದಾರೆ; ಅಮೆರಿಕ ಮತ್ತು ಕನ್ನಡಿಗರ ನಂಟು ಈಚಿನ ಕೆಲವು ದಶಕಗಳಲ್ಲಿ, ಅದರಲ್ಲೂ ಮುಖ್ಯವಾಗಿ ಇಪ್ಪತ್ತನೆಯ ಶತಮಾನದಲ್ಲಿ ಗಾಢವಾಗಿದೆ. ಕನ್ನಡ ನಾಡಿನಿಂದ ಅಮೆರಿಕಕ್ಕೆ ಉದ್ಯೋಗವನ್ನರಸುತ್ತಾ ಹೋದ ಕನ್ನಡಿಗರು, ಅಲ್ಲಿ ಅನುಭವಿಸಿದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಭಾವನಾತ್ಮಕ ತಲ್ಲಣಗಳೇನು? ಪಲ್ಲಟಗಳೇನು? ಅಮೆರಿಕನ್ನಡಿಗರ ಜೀವನದ ಐದು ದಶಕಗಳ (ಸರಿಸುಮಾರು 1960ರಿಂದ 2023) ಇತಿಹಾಸವನ್ನು ಕೆಲವೇ ಶಬ್ದಗಳಲ್ಲಿ ಸೆರೆಹಿಡಿಯುವ ಯತ್ನ ಈ ಬರಹದಲ್ಲಿದೆ. ಹಲವು ದಶಕಗಳಿಂದ ಅಮೆರಿಕದಲ್ಲಿ ನೆಲಸಿರುವ ಮೈ.ಶ್ರೀ.ನಟರಾಜ ಅವರು ಇತ್ತೀಚೆಗೆ ಬಾಸ್ಟನ್‌ನ ಮಂದಾರ ಕನ್ನಡ ಕೂಟದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಮಾಡಿದ ಆಶಯ ಭಾಷಣವಿದು. ಉದ್ದನೆಯ ಮಾಮೂಲಿ ಭಾಷಣದ ಬದಲಿಗೆ ವಿಭಿನ್ನ ಶೈಲಿಯದೊಂದು ಪ್ರಸ್ತುತಿ. ಸಂಗೀತದಲ್ಲಿ ರಾಗಮಾಲಿಕೆ, ತಾಳಮಾಲಿಕೆಗಳಿದ್ದಂತೆ ಇದು ಒಂದು ಶಬ್ದಮಾಲಿಕೆ. ಇಲ್ಲಿ ನಮ್ಮ ವೈಯಕ್ತಿಕ ಜೀವನದ ಜೊತೆ-ಜೊತೆಗೆ ಕನ್ನಡ ಕೂಟಗಳ ಬೆಳವಣಿಗೆ, ಮತ್ತು ಅಮೆರಿಕದ ವಿದ್ಯಮಾನಗಳೂ ಹಾಸುಹೊಕ್ಕು ಜಡೆಗಟ್ಟಿವೆ. ಅಮೆರಿಕದಲ್ಲಿರುವ ಓದುಗರಿಗಂತೂ ಇದು ಸುಲಭವಾಗಿ ರಿಲೇಟ್ ಆಗುತ್ತದೆ; ಕರ್ನಾಟಕದಲ್ಲಿನ ಓದುಗರಿಗೂ ಸ್ಥೂಲ ಕಲ್ಪನೆ ಸಿಗಬಹುದು.

» ಡಾ. ಮೈ.ಶ್ರೀ.ನಟರಾಜ

ಮೊದಲ ದಶಕ

ಬಲಿತ ರೆಕ್ಕೆ- ಗೂಡು ಬಿಟ್ಟು ಹಾರುವ ತವಕ- ಸಾಧನೆಯ ಹಸಿವು- ಗುಜರಾಯಿಸು ಅರ್ಜಿ- ಅರ್ಜಿಸು ಸೀಟು- ಪಡೆದುಕೋ ವಿದ್ಯಾರ್ಥಿ ವೇತನ- ಪಾಸ್‌ಪೋರ್ಟು- ವೀಸಾ- ಜಿಗಿತದ ರೋಮಾಂಚನ- ನಭೋಮಂಡಲ- ಮೇಘರಾಶಿ- ಭೂಸ್ಪರ್ಶದ ಚಡಪಡಿಕೆ- ಅಪರಿಚಿತ ದೇಶ-ಮುಂದೇನೋ? ಬಲ್ಲವರಾರು? ಅದೊಂದು ಕಗ್ಗಂಟು- ಅರ್ಥವಾಗದ ಆಕ್ಸೆಂಟು- ಇದೆಲ್ಲಿ ಬಂದು ಬಿದ್ದುಬಿಟ್ಟೆ? ತಪ್ಪು ಮಾಡಿದೆನೇ? ಏನೋ ಅಳುಕು. ತಾಳ್ಮೆಬೇಕು- ಈಸಬೇಕು- ಇದ್ದು ಜೈಸಬೇಕು- ಆದರೆ- ಮೂಗಿಗೆ ಪರಿಚಿತ ವಾಸನೆಗಳಿಲ್ಲ- ನಾಲಿಗೆಗೆ ಒಗ್ಗಿದ ರುಚಿಯಿಲ್ಲ- ಕಿವಿಗೆ ಅಭ್ಯಾಸವಾಗಿದ್ದ ಸದ್ದುಗಳಿಲ್ಲ- ಒಂಟಿತನ- ಹುಚ್ಚುಹಿಡಿಯುವುದೊಂದೇ ಬಾಕಿ- ಹಸಿವು- ಎಂಟಿಆರ್ ಇಲ್ಲ- ಬರೀ-ಎಂಟಿ!

ತೌರ ನೆನಪು- ನಿನ್ನ ಊಟವ ನೀನೇ ಬೇಯಿಸಿಕೊಳ್ಳಬೇಕು- ಇಲ್ಲದಿರೆ ಉಪವಾಸವಿರಬೇಕು- ಬೇಳೆಯಿಲ್ಲದ ಸಾರು- ಸಾಸಿವೆ-ಜೀರಿಗೆ-ಇಂಗು-ಒಗ್ಗರಣೆಯ- ಘಮವಿಲ್ಲ-ಅಯ್ಯೋ- ಬಯಕೆ- ಕರಿಬೇವು ಕೊತ್ತುಂಬರಿ ಸೊಪ್ಪಿಗೆ ಸಮವಿಲ್ಲ- ಹುಡುಕಾಟ-ರುಚಿಯಿಲ್ಲದೂಟ- ರುಬ್ಬದ-ಬಟಾಣಿಗೆ ತೌರಿನಿಂದ ತಂದ ಮೆಣಸಿನಪುಡಿ. ಪುಟಗಟ್ಟಲೆ-ಪತ್ರಗಳು-ಇತ್ತಲಿಂದ- ಅತ್ತಲಿನ ಅಂಚೆಗಾಗಿ ಕಾಯುವ ಚಾತಕಪಕ್ಷಿ- ಊರ-ಮಂದಿಯ ನೆನೆದು- ಕಣ್ಣು ತೇವ. ಹೇಗೋ-ಸಾಗುತ್ತದೆ ಕಾಲ- ಎಲ್ಲಕೂ ಮುಲಾಮು ಹಚ್ಚುವ ಜಾಲ! ಓಹೋ ಚಿಂತೆಯಿಲ್ಲ- ಎಲ್ಲೋ ಕೇಳುತಿದೆ ಕನ್ನಡ- ಸವಿಗನ್ನಡ- ಕನ್ನಡವೆನೆ ಕುಣಿದಾಡುವುದೆನ್ನೆದೆ- ಕನ್ನಡವೆನೆ ಕಿವಿ ನಿಮಿರುವುದು! ಯಾರೋ ಬಿತ್ತಿದರು- ಕನ್ನಡದ-ಬೀಜ-ಅಲ್ಲಲ್ಲಿ ಚಿಗುರುತಿದೆ- ಕನ್ನಡದ ತೇಜ! ಅತ್ತ: ಅಮೆರಿಕದ ಪ್ರಜೆಯೊಬ್ಬ ಚಂದಿರನ ಮೇಲೆ ಹೆಜ್ಜೆಯಿಟ್ಟ- ಆಹಾ ಎಂಥ ದೇಶ! ಇತ್ತ: ವಿಯಟ್ನಾಮ್ ಯುದ್ಧ- ಲಕ್ಷ-ಲಕ್ಷ ಹೆಣಗಳು- ಕೋಟಿ-ಕೋಟಿ ಸ್ಫೋಟಗಳು. ದೇಶದುದ್ದಕೂ- ಬಾಂಬ್ ಕೊರೆದ ಗುಂಡಿಗಳು- ಹೆಣಗಳಿಗೆ ತೋಡಬೇಕಿಲ್ಲ ಗೋರಿ.

ಈ ಮಧ್ಯೆ: ಟೀವಿಯ ಮೇಲೆ ಸದಾ ನೀರ್ ಬಾಗಿಲ ವಟವಟ (ವಾಟರ್ ಗೇಟ್).

ಯಾರು ವಟಗುಟ್ಟಿದರೇನು? ಯಾರು ಸತ್ತರೆ ಏನು? ಓದಲೇ ಬೇಕು ನಾನು! ಓದು-ಬರಹ-ಪರೀಕ್ಷೆಗಳ ಮೇಲೆ ಪರೀಕ್ಷೆಗಳು- ಸಂಶೋಧನೆ- ಮಹಾಪ್ರಬಂಧ- ಪದವಿ- ಹೆಸರ ಹಿಂದೆ-ಅಂಟಿದ ಡಾಕ್ಟರ್ ಬಿರುದು- ಸಾರ್ಥಕ- ಮುಂದೆ? ಮತ್ತೊಮ್ಮೆ ದ್ವಂದ್ವ: ಇರಬೇಕೇ ಇಲ್ಲೇ- ಹೋಗಬೇಕೆ-ಅಲ್ಲೇ? ಹುಡುಕಬೇಕು ವೃತ್ತಿ- ಗಳಿಸಬೇಕು ಬುತ್ತಿ- ಎಲ್ಲಿದ್ದಾಳು ಜೊತೆಗಾರ್ತಿ? ಸುತ್ತ ಶ್ವೇತ ಸುಂದರಿಯರು- ಕೋಮಲ-ಶಾಮಲಾಂಗಿಯರು- ಛೆ-ಛೆ ಮಾಡಿ ಬಡಿಸುವರೇ ತಿಳೀ ಸಾರು?

ಹಾಗಿದ್ದರೆ- ಭಾರತಕೆ ಹಾರು- ಹಾರುವಗೆ- ಬೇಕೇಬೇಕು- ಸಾರು-ಸಾಂಬಾರು- ಸ್ವದೇಶೀ-ಸುಂದರಿಯರ ನಾಡಿಗೆ ಹಾಕು ಲಗ್ಗೆ- ವಿಚಾರಿಸು ಕನ್ಯೆಯರ ಬಗ್ಗೆ- ನಡೆಸು ಕನ್ಯಾಶೋಧ- ಆಗು ದಿಢೀರ್-ಮದುವೆ- ಕರೆಸಿಕೋ ಬಾಳ ಸಂಗಾತಿ- ಆವಳೀಗ ಒಂಟಿ- ನಾನೂ ಒಂಟಿ! ಮತ್ತೊಮ್ಮೆ ತೌರ ನೆನೆಯುವ- ನೆನೆದು ಮರುಗುವ- ವಿರಹ- ನೂರು-ನೂರು-ತರಹ- ಆಕೋ- ಬಂದಳು-ಒಬ್ಬಳಿಗೇ ಮನೆಯಲಿ ಬೋರು- ಕನ್ನಡ ಕೂಟಕೆ ಸೇರು- ಅಲ್ಲಲ್ಲಿ- ಪುಟ್ಟ-ಪುಟ್ಟ ಸಂಸಾರಗಳು-ಹುಟ್ಟುಹಬ್ಬಗಳು- ಪಾರ್ಟಿಗಳೋ- ಪಾರ್ಟಿಗಳು- ಪಾಟ್ಲಕ್ಕುಗಳೋ-ಪಾಟ್ಲಕ್ಕುಗಳು- ಕನ್ನಡ-ಮಾತುಗಳು- ಕನ್ನಡ ಗೀತೆಗಳು- ಕನ್ನಡ ಸಿನಿಮಾಗಳೂ ಅಪರೂಪಕೊಮ್ಮೊಮ್ಮೆ. ಯುಗಾದಿ-ಗೌರಿ-ಗಣೇಶ-ನವರಾತ್ರಿ-ದೀವಳಿಗೆ- ಮಕ್ಕಳ-ಕಿಲಿ-ಕಿಲಿ-ಕನ್ನಡ-ಕಲಿ-ಕಲಿ- ಎಲ್ಲಕೂ-ಇರುವುದು- ಕನ್ನಡಿಗರ- ಕೂಟ.

ಎರಡನೇ ದಶಕ

ಋತು ವಸಂತದಿ ಬಂತು ಬೇವು ಬೆಲ್ಲ- ಭಾದ್ರಪದ ಚೌತಿಯಲಿ ಗಣಪ ಡೊಳ್ಳ ನವರಾತ್ರಿ ದೀವಳಿಗೆ ಹರಿದಿನಗಳಲ್ಲಿ ಮಂದಾರ ಮಲ್ಲಿಗೆಯ ಸುಗಂಧಗಳ ಬಳ್ಳಿ ಎಲ್ಲೆಲ್ಲು ಕನ್ನಡದ ಕಂಪ ನೋಡ - ಇದೇ ಚೆಂದದ ನಾಡು ತಾಯ್ನಾಡು ಬೇಡ ಇನ್ನೆಲ್ಲಿ ವಿರಹ, ಕೈತುಂಬ ವರಹ- ಯಾರು ಹಿಂದಿರುಗುವರು? ಅಯ್ಯೋ ಮೂಢ!

ಕಾರುಗಳು- ಕಾರುಬಾರುಗಳು- ಬಂಗಲೆಗಳು- ಕಂಪನಿಯಿಂದ- ಕಂಪನಿಗೆ- ನೆಗೆತ-ಪ್ರಮೋಷನ್ನುಗಳು- ಇನ್ಸಿಮೆಂಟುಗಳು- ಲೇಆಫ್‌ಗಳು- ಕೆಲಸ ಕಳೆದುಕೊಂಡಾಗ ಮತ್ತೊಮ್ಮೆ ತೌರಿನ ಪ್ರೀತಿ- ಇದೇ ನಮ್ಮನೀತಿ- ಇದೇ-ನಮ್ಮ ರೀತಿ- ದೇವರಿಗೇ ಪ್ರೀತಿ! ಅಯ್ಯೋ! ಮನೋವಿಕಾರದ ವ್ಯಕ್ತಿ- ಅಧ್ಯಕ್ಷನೆದೆಗೆ ಗುರಿ ಇಟ್ಟ- ಸತ್ತು ಬದುಕಿದ ರೇಗನ್- ಆದರೂ ಇಂದಿಗೂ ಬಂದೂಕಿನ ಪ್ರೀತಿ- ದೇವರೇ ಗತಿ!

ಮೂರನೇ ದಶಕ

ಮಕ್ಕಳು-ಮರಿಗಳು- ಲಕ್ಷಕೂ ಮೀರಿ ಹರಡಿರುವರು ಕನ್ನಡಿಗರು. ದೇಶದ- ಉದ್ದಗಲಕೂ- ಹೊರಗೆಲ್ಲ- ಅಮೆರಿಕದ ಜೀವನ ಭಾಗ- ಒಳಗೆಲ್ಲ ಅದೇ ಕನ್ನಡದ ತಿರುಳಿನ- ಯೋಗ-ಸ್ಲೀಪೋವರ್ರುಗಳು- ಊಟ-ಪ್ರತ್ಯೂಟ- ಒಮ್ಮೊಮ್ಮೆ ಬಹುಕಾಟ- ಹೈಸ್ಕೂಲು ಬಹು ಮುಖ್ಯ-ಆದರೂ ಮರೆಯಲಾಗದು - ಸಂಗೀತ-ನೃತ್ಯ! ಕಚೇರಿಗಳು- ರಂಗಪ್ರವೇಶಗಳು- ಕಲಿತವರೆಷ್ಟೋ? ಮರೆತವರೆಷ್ಟೋ?- ಎನ್‌ಟಿ ಸ್ಕೋರುಗಳು- ಏಪಿ ಟೆಸ್ಟುಗಳು- ಕಾಲೇಜು ಹುಡುಕಾಟ- ಒಂದು ಸೀಟಿಗೆ ನೂರು ಕಡೆ-ಅರ್ಜಿ- ಹಸಿರು ಬಳ್ಳಿಯ ಕಲ್ಲು-ಗೋಡೆ (ಐವಿ-ಲೀಗು) ಕೆಲರಿಗೆ ಮಾತ್ರ-ಪ್ರಾಂತೀಯವಾದರೇನು ಕಮ್ಮಿ?- ಹಣವೂ- ಉಳಿಯುವುದು- ಕೆಲವರ- ಹುಳಿದ್ರಾಕ್ಷಿ-ಸಮಾಧಾನ- ಗ್ರಾಜುಯೇಶನ್ ಪಾರ್ಟಿಗಳು- ಜುಟ್ಟುಗಳು- ಮುಂಜಿಗಳು- ಈಮಧ್ಯೆ- ಕನ್ನಡಿಗರ- ಮಿಳನ-ಸಮ್ಮಿಳನ- ಪ್ರಾಂತೀಯ-ಸಮ್ಮೇಳನ- ರಾಷ್ಟ್ರೀಯ-ಜಾತ್ರೆಗಳು- ನಾಟಕಗಳು- ಸಿನಿಮಾಗಳು-ಗೋಷ್ಠಿಗಳು- ಕರ್ನಾಟಕದ ಕಲಾವಿದರ ಆಗಮನ- ರಾಜಕಾರಿಣಿಗಳ ಆಕ್ರಮಣ- ಕೂಟಗಳ ಆಕ್ರಂದನ- ಕದ್ದು-ಮುಚ್ಚಿ ಡೇಟಿಂಗು-ಮೀಟಿಂಗು- ಆಮೇಲೆ ರಾಜಾರೋಷ- ಆದರೂ ಬಿಡೆವು ನಾವ್ ವರಾನ್ವೇಶಣೆ- ಕನ್ಯಾನ್ವೇಶಣೆ- ಬರೀ ಕಂಠಶೋಷಣೆ.

ಸದ್ದಾಮನಿದ್ದಾನೆ-ಎಚ್ಚರಿಕೆ! ಆಗೋ ಬಂತು- ಕೊಲ್ಲಿ-ಯುದ್ಧ- ಕಳ್ಳನಿಗೊಂದು ಪಿಳ್ಳೆ ನೆವ! ಅಮೆರಿಕದ- ಬಾಂಬುಗಳಿಗೆ- ಫೀಲ್ಡ್- ಟೆಸ್ಟಿಂಗ್- ಅಷ್ಟೆ! ಸತ್ತವರ್ಯಾರೂ ಮನುಷ್ಯರೇ- ಅಲ್ಲ. ಎರಡೂ-ಶೂನ್ಯ-ಶೂನ್ಯ-ಶೂನ್ಯ. (2000) ವೈ-ಟೂ-ಕೇ- ದೇಶವೇ ಸ್ತಗಿತ- ನೀರು-ವಿದ್ಯುತ್-ಅನಿಲ- ಎಲ್ಲ-ಕಟ್- ಹುಚ್ಚುಮುಂಡೇ-ಮದ್ವೇಲಿ ಉಂಡೋನೆ ಜಾಣ- ಏನೂ ಕಟ್ಟೇ ಆಗಲಿಲ್ಲ- ಬರೀ ಲೊಳ-ಲೊಟ್ಟೇ!

ಬಂತು- ಎರಡು-ಸಾವಿರದ-ಒಂದು-ಸೆಪ್ಟೆಂಬರ್-ಹನ್ನೊಂದು-ಸಿರಿ ಕೇಂದ್ರದ ಸೌಧಗಳ ಜೋಡಿ-ಅಗಿಹೋಯಿತು- ಪುಡಿ-ಪುಡಿ. ತಂದೆ-ಬಡಿದಿದ್ದು - ಸಾಲದು- ಮಗರಾಯನೂ ಬಂದ-ಮಾರಣ-ಹೋಮದ-ಮಾರಕಾಸ್ತ್ರಗಳನು- ಅಡಗಿಸಿಟ್ಟಿದ್ದಾನೆ-ಸದ್ದಾಮ ಎಂದ- ಮತ್ತಷ್ಟು-ಪಟಾಕಿ-ದೀವಳಿಗೆ ಹಬ್ಬ- ಮಾರಿಗೆ ಮತ್ತಷ್ಟು ಔತಣ.

ನಾಲ್ಕನೇ ದಶಕ

ಮಕ್ಕಳ ಭವಿಷ್ಯದ ಚಿಂತೆ- ಓದುವರು- ವೃತ್ತಿಮಾಡುವರು- ಮದುವೆ-ಮಾತ್ರ -ಆಗರು- ಲೀವ್ ಮಿ ಅಲೋನ್ ಎನ್ನುವರು- ಕೆಲವರು ಯಾರಿವನು ರ‍್ಯಾಂಡಮ್ ಹುಡುಗ? ಎಂದು-ಕೇಳುವರು-ಅಪರೂಪಕ್ಕೆ- ಕೆಲರು-ತಾವೇ ಹೇಗೋ ಜೊತೆ-ಗೂಡುವರು- ಆಹಾ! ಮದುವೆಗಳು- ಅಂತರ್ಜಾತಿ- ಅಂತರ್ಭಾಷೆ- ಅಂತರ್ಧರ್ಮ- ಅಂತಾರಾಷ್ಟ್ರೀಯ- ಎಂತೆಂಥ ಜೋಡಿಗಳು- ಬಣ್ಣಗಳ ಮಿಶ್ರಣ-ಬಣಗಳ ಮಿಶ್ರಣ- ಭಾಷೆಗಳ ಮಿಶ್ರಣ- ಓಲಗ- ಡೋಲುಗಳು- ಲಾಡು-ಚಿರೋಟಿಗಳು-ಬೆಳಿಗ್ಗೆ, ಚಾಟುಗಳು-ಭೇಲ್ಪುರಿ-ಬೀರು-ವೈನುಗಳು-ಭಾಂಗಡಾ-ನೃತ್ಯಗಳು- ಸಂಜೆ. ಋಷಿಪಂಚಮಿ ಮಾಡಿದವರೂ ಕುಪ್ಪಳಿಸಿ-ಕುಣಿವ-ಜೋಡಿಗಳು- ನೀರಿನಂತೆ ಹಣದ ಖರ್ಚು- ಮೊದಲು ದೇಗುಲ-ನಂತರ ಚರ್ಚು- ವೆಚ್ಚಗಳ ಹಿಂದೆ ವ್ಯಥೆಗಳು- ಜೊತೆಗೂಡುವ- ಬಿಸಿ ಆರುವ ಮೊದಲೇ-ವಿಚ್ಛೇದನದ- ಕಥೆಗಳು- ಮಕ್ಕಳಿಗೆ-ಮಕ್ಕಳು- ಈಗ- ನಾವು ಅಜ್ಜ-ಅಜ್ಜಿಯರು- ಏರುತಿದ್ದ ಜೀವನದಲ್ಲಿ-ಪೇರುಗಳು- ಖಾಯಿಲೆಗಳು. ಅಲ್ಲಿಲ್ಲಿ- ಆಗಾಗ್ಗೆ-ಜವರಾಯನ ಆಗಮನ- ನೆಂಟರ-ಇಷ್ಟರ- ನಿರ್ಗಮನ- ನಂಬದಿರು-ಈ-ದೇಹ-ನಿತ್ಯವಲ್ಲ- ಪರಸ್ಪರ-ಸಾಂತ್ವನ- ಆಪತ್ಕಾಲದಲ್ಲಿ-ವ್ಯಸನದಲ್ಲಿ- ಜೊತೆಗಿದ್ದವನೇ- ನೆಂಟ- ಕನ್ನಡ-ಕೂಟದಲ್ಲಿ ಮಾತಾಡಿಸದಿದ್ದವರೂ- ಶವಾಗಾರಕೆ- ಬಂದು ಸುರಿಸುವರು ಕಣ್ಣೀರು- ನಾವೇ- ವಿಶ್ವಕುಟುಂಬಿಗಳು.

ಬಿಳಿಯರ ಅಮೆರಿಕದಲ್ಲಿ
ಕೃಷ್ಣವರ್ಣದವವನೊಬ್ಬ
ಅಧ್ಯಕ್ಷನಾದ
ಮಹದಾಶ್ಚರ್ಯ!

ಕರಿಯ ಜೀವಕೂ ಉಂಟು ಬೆಲೆ ಕೇಳಿರೋ! ಬ್ಲ್ಯಾಕ್ ಲೈವ್ಸ್ ಮ್ಯಾಟರ್! ಕಾಲಂಬೈನ್‌ನಲ್ಲಿ ಧಡಧಡ; ಎಷ್ಟು ಬಾರಿ ಮಕ್ಕಳು ಸತ್ತರೂ- ಅವರ್ ಥಾಟ್ಸ್ ಎಂಡ್ ಪ್ರೆಯರ್ಸ್ ಆರ್ ವಿಥ್ ಯು. ಬಿಟ್ಟರೆ ಏನೂ ಇಲ್ಲ. ಎಲ್ಲಕೂ ಒಂದೇ ಸಿಂಪತಿ ಮಂತ್ರ. ಆರಿಸಿ ಬಂದವರು ಏನೂ ಮಾಡುವುದಿಲ್ಲ. ಬಂದೂಕು ಕೊಲ್ಲುವುದಿಲ್ಲ, ಗುಂಡು ಕೊಲ್ಲುವುದಿಲ್ಲ. ಹೊಡೆಯುವವ ತಲೆತಿರುಕ, ತೋರಿ ಮರುಕ; ಒಟ್ಟಿನಲಿ ಬೇಕು ಸ್ವಾತಂತ್ರ್ಯ. ಹುಚ್ಚು ಬೊಗಳಲು ಸ್ವಾತಂತ್ರ್ಯ, ಸುಳ್ಳು ಹರಡಲು ಸ್ವಾತಂತ್ರ್ಯ, ಏನಾದರೂ ಸರಿ, ಶಸ್ತ್ರಸ್ವಾತಂತ್ರ್ಯವಿಲ್ಲದೇ ಬದುಕಲಾರರು ಇವರು - ಗುಂಡು ಗಾವಿಲರು!

ಮಹಿಳೆಯೊಬ್ಬಳು ಆದಾಳೇ ಅಧ್ಯಕ್ಷೆ

ಈ ದೇಶದಲ್ಲಿ?
ಛೇ- ಅದು ಹೇಗೆ ಸಾಧ್ಯ?
ತುರುಫನಿದ್ದಾನೆ ಈ ದೇಶದಲ್ಲಿ.
ಮಾ-ಗ-ಮಾಗ-ಮಾ-ಗ-ಮಾಗ-
ಮೀ-ಟೂ-ಮೀಟೂ-ಮೀ-ಟೂ-ಮೀಟೂ

ಐದನೇ ದಶಕ

ಕಂಡು ಕೇಳರಿಯದ ಮಹಾಮಾರಿ- ಕೋವಿಡ್ ಎಂಬ ಕಂಟಕ- ನೆಂಟರಿಷ್ಟರ ಸಾವು- ಎಲ್ಲರೂ-ಮನೆಯಲ್ಲಿ ಸೆರೆ- ಕಚೇರಿಗೂ ಕನ್ನಡ-ಕೂಟಗಳಿಗೂ ಝೂಮ್- ಎಂಬ-ಮ್ಯಾಜಿಕ್- ಎಲ್ಲಿದೆ-ವೈರಾಣು? ನೆಲದಲ್ಲೋ? ಜಲದಲ್ಲೋ? ಗಾಳಿಯಲ್ಲೋ ಆಹಾರದಲ್ಲೋ? ಇತರರ ಸಂಗತಿಯಲ್ಲೋ? ಹೇಗೆ ಕಳೆಯಿತೋ ಮೂರು ವರ್ಷ? ಅಂತೂ ಕಲಿಸಿತು- ಸಾಕಷ್ಟು ಪಾಠ!

ಅಯ್ಯೋ-ಅಯ್ಯೋ- ಅರಸನೇ ಇಟ್ಟನೇ- ಅರಮನೆಗೆ ಲಗ್ಗೆ?- ನಾನು-ಗೆದ್ದರೆ ಗೆದ್ದೆ- ನಾನು-ಸೋತರೂ ಗೆದ್ದೆ- ಇದೆಂಥಾ ಪ್ರಜಾತಂತ್ರ? ಭಂಡರ- ಕುತಂತ್ರ- ಮೂರನೇ ವಿಶ್ವದಲಿ ನೂರಾರು-ಕೋಟಿ ಮತಗಳ ಎಣಿಕೆಯಲಿ ಇಲ್ಲದ ಗೊಂದಲ- ಮುಂದುವರೆದ ಈ ದೇಶದಲ್ಲೇಕೆ? ಕಣ್ಣೆದುರಿಗೇ ಕಂಡ ಮುತ್ತಿಗೆಗೆ- ಸಾಕ್ಷಿ ಬೇರೇ ಬೇಕೇ? ನ್ಯಾಯ ಮೂರ್ತಿಗಳೆಲ್ಲ-ಅನ್ಯಾಯದೆಡೆಗೋಡೆ- ಎಡ-ಬಲದ-ನಡುವಿನಲಿ- ಮುಲುಗಿಹಳು- ಸ್ವಾತಂತ್ರ್ಯದೇವಿ-ಭ್ರಮ-ನಿರಸನ- ಭ್ರಮ-ನಿರಸನ- ಭ್ರಮ ನಿರಸನ-

ರಾಜ್ಯಗಳುದಿಸಲಿ-ರಾಜ್ಯಗಳಲಿಸಲಿ-ಹಾರಲಿ-ಗದ್ದುಗೆ-ಮುಕುಟಗಳು-ಮುತ್ತಿಗೆ-ಹಾಕಲಿ- ಸೈನಿಕರೆಲ್ಲ ಸ್ವರ್ಣ ಮಹೋತ್ಸವ ನಿಲ್ಲುವುದಿಲ್ಲ! ಶಿಕಾಗೋದಲ್ಲಿ ವಿದ್ಯಾರಣ್ಯ, ರಾಜಧಾನಿಯ ಕಾವೇರಿ- ನ್ಯೂ ಯಾರ್ಕಿನ ಕನ್ನಡ-ಕೂಟ- ಬಾಸ್ಟನ್ನಿನ-ಮಂದಾರ- ಹೊಡೆಯಿರಿ ಚಪ್ಪಾಳೆ! ಇನ್ನೇನು ಬರಲಿವೆ- ದಕ್ಷಿಣ ಕ್ಯಾಲಿಫೋರ್ನಿಯಾ, ಉತ್ತರ ಕ್ಯಾಲಿಫೋರ್ನಿಯಾ, ಅಟ್ಲಾಂಟ, ಇದೇ ವರ್ಷ- ಇನ್ನೂ ಅನೇಕ ಸ್ವರ್ಣಮಹೋತ್ಸವಗಳು- ಸಾಲು ಸಾಲಾಗಿ. ಇದಲ್ಲವೇ ಅಮೆರಿಕನ್ನಡಿಗರ ಹೆಮ್ಮೆ?

ನಾವಿಲ್ಲಿ ಬಂದಾಗ- ವಯಸು- ಇಪ್ಪತ್ತೈದು- ಕನ್ನಡ ಸಂಘಗಳಿಗಾಗ-ಹುಟ್ಟಿದ ವರುಷ- ಸಂಘಗಳು ಬೆಳ್ಳಿಹಬ್ಬವ ಮುಗಿಸಿ- ಚಿನ್ನದ-ಹಬ್ಬಕ್ಕೆ ಕಾಲಿಡುವಾಗ- ನಮಗೆ- ಎಪ್ಪತ್ತೈದು- ಎಲ್ಲೋ ಹುಟ್ಟಿದ ನಾವು- ಎಲ್ಲೋ ಓದಲು ಬಂದು- ಇಲ್ಲೇ ನೆಲದಲಿ ನಿಂದು- ಅಲ್ಲಿರುವ ನಮ್ಮ ನಾಡು-ನುಡಿ-ಹಾಡು- ಕುಣಿತ- ಹಬ್ಬ-

ಹರಿದಿನ- ತಿನಿಸುಗಳು- ಆಚಾರ- ವಿಚಾರ- ಯಾವುದೂ ಮರೆತು ಹೋಗದಂತೆ- ಅಲ್ಲಿನ- ನದಿಗಳು- ಅಲ್ಲಿನ- ಹೂಗಳು- ಅಲ್ಲಿನ- ಸಿರಿಗಂಧ- ಎಲ್ಲವನ್ನೂ ಇಲ್ಲೇ ಉಂಟುಮಾಡಿದ- ಆಗುಮಾಡಿದ- ಕನ್ನಡ-ವೃಕ್ಷಕ್ಕೆ- ಸ್ವರ್ಣ-ಮಹೋತ್ಸವ!

ಬನ್ನಿ ಮಾಡೋಣ-ಪ್ರದಕ್ಷಿಣೆ- ಯಾರೋ ಬಿತ್ತಿದ ಬೀಜ- ನೆಟ್ಟ ಸಸಿ- ಬಿಟ್ಟ ಬೇರು- ಆತ್ತಿತ್ತ ಕೈ ಚಾಚಿದ- ಕೊಂಬೆಗಳು-ಒಮ್ಮೊಮ್ಮೆ ಗಾಳಿ-ಮಳೆಗೆ- ತೂರಾಡಿ- ಮುರಿದು ಬಿದ್ದರೂ- ಬಿಟ್ಟ ಬೇರಿನ ಆಳ- ಹೃದಯಾಂತರಾಳ- ಮನಸಿಗೆ ತುಂಬು ನಿರಾಳ!

ಉಪಸಂಹಾರ

ಮನುಷ್ಯ ಹುಟ್ಟುವಾಗ ತಂದೆ ತಾಯಿಗಳನ್ನಾಗಲೀ ತನ್ನ ಜನ್ಮಸ್ಥಳವನ್ನಾಗಲೀ ಆಯ್ದುಕೊಳ್ಳಲಾರ. ಆದರೆ ತಾನೇ ಹುಟ್ಟಿ ಹಾಕುವ ಸಂಘ ಅವನದೇ ಆಯ್ಕೆ. ಅದರ ಸದಸ್ಯತ್ವ ಕೂಡ ಅವನದೇ ಆಯ್ಕೆ. ಪರದೇಶಿಗಳಾದ ನಮಗೆ ನಾನು-ನನ್ನದು- ನಮ್ಮವರು-ತಮ್ಮವರು ಎಂಬ ಸಂವೇದನೆಗಳನ್ನು ಕಲ್ಪಿಸುವ ಕನ್ನಡ ಕೂಟಗಳು, ನಮಗೆ ದೇವರು ಕೊಟ್ಟವರ. ಕನ್ನಡ ಸಂಸ್ಕೃತಿ, ಭಾರತ ಜನನಿಯ ತನುಜಾತೆಯಾದ ಕನ್ನಡ ಭುವನೇಶ್ವರಿಯ ಅಕ್ಕರೆಯ ಆಶೀರ್ವಾದ ನಮಗೆ ಮತ್ತು ನಮ್ಮ ಮಕ್ಕಳಿಗೆ ದೊರಕಿರುವುದು ಮಂದಾರದಂಥ ಕೂಟಗಳ ಕಾರಣದಿಂದಲೇ ಎಂಬುದನ್ನು ನಾವು ಮರೆಯ ಕೂಡದು. ಪುಷ್ಪಗಂಧ ಗಾಳಿಯಲಿ ಬೆರೆತು ಮತ್ತು ಬರುವಂತಾಗಲಿ.

ಸಿರಿಗನ್ನಡಂ ಬಾಳ್ಗೆ!

ಯಾವಾಗ ಬಂದೀತು 'ಯಾಂಬು' ಕುಣಿತ?

» ಡಾ. ಕೆ.ಎಸ್. ಪವಿತ್ರ

**ಆರ್ಟಿಫೀಷಿಯಲ್ ಇಂಟೆಲಿಜೆನ್ಸ್ ಎಂಬುದು ಈಚಿನ ವರ್ಷಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಪ್ರಭಾವ ಬೀರುತ್ತಿದೆ. ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ಇಲ್ಲದೇ ಕೆಲವು ಕಾರ್ಯಗಳು ನಡೆಯುವುದೇ ಇಲ್ಲ ಎಂಬ ಸ್ಥಿತಿಯೂ ಸೃಷ್ಟಿಯಾಗಿದೆ. ಯಾಂಬುವಿನ ಒಂದು ವಿಭಾಗವಾದ ಚಾಟ್ ಜಿಪಿ